## ದಮಯಂತಿಯ ಮಗಳು




ತೆಲುಗಿನ ಪ್ರಮುಖ ಸ್ತ್ರೀವಾದಿ ಲೇಖಕಿಯರಲ್ಲಿ ಒಬ್ಬರಾದ ಪಿ. ಸತ್ಯವತಿ, 2021ರ ಸಾಲಿನ 'ಕುವೆಂಪು ರಾಷ್ಟ್ರೀಯ ಪ್ರಶಸ್ತಿ'ಕ್ಕೆ ಪಾತ್ರರಾಗಿರುವ ಲೇಖಕಿ. ಅವರ ಏಳು ಕಥೆಗಳನ್ನು 'ದಮಯಂತಿಯ ಮಗಳು' ಹೆಸರಿನಲ್ಲಿ ಅಜಯ್ ವರ್ಮಾ ಅಲ್ಲೂರಿ ಕನ್ನಡಕ್ಕೆ ತಂದಿದ್ದಾರೆ. ಈ ಎಲ್ಲ ಕಥೆಗಳು ಸ್ತ್ರೀಲೋಕದ ಅನನ್ಯತೆಯನ್ನು ಪರಿಚಯಿಸುವ ಕೆಲಸವನ್ನು ಮಾಡುತ್ತವಾದರೂ, ಆಳದಲ್ಲಿ ಇವುಗಳು ಮನುಷ್ಯನ ತವಕತಲ್ಲಣಗಳ ಕುರಿತು ಧ್ಯಾನಿಸಿವೆ. ಸ್ತ್ರೀವಾದ ಅಥವಾ ಯಾವುದೇ ತಾತ್ವಿಕತೆ ಪ್ರಧಾನವಾದ ಕಥೆಗಳು, ಸಿದ್ಧಾಂತದ ಭಾರದಿಂದ ನಲುಗುವುದುಂಟು. ಸತ್ಯವತಿ ಅವರ ಕಥೆಗಳಲ್ಲೂ ಸಿದ್ಧಾಂತದ ನೆಲೆಗಟ್ಟು ಸ್ಪಷ್ಟವಾಗಿ ಕಾಣುತ್ತದೆಯಾದರೂ, ಆ ತಾತ್ವಿಕತೆ ಕಥನದೊಂದಿಗೆ ಬಹು ಸಹಜವಾಗಿ ಮಿಳಿತಗೊಂಡಿರುವುದು ಕಥೆಗಳ ಹೊಳಪನ್ನು ಹೆಚ್ಚಿಸಿದೆ. ಇಲ್ಲಿನ ಸ್ತ್ರೀಪಾತ್ರಗಳು ತಮ್ಮ ಬದುಕಿನ ಸಂಕಷ್ಟ ಅಥವಾ ಬಿಕ್ಕಟ್ಟುಗಳಿಗೆ ಯಾರನ್ನೂ ದೂರುವುದಿಲ್ಲ. ಪುರುಷ ಪಾತ್ರಗಳನ್ನೂ ಸಹಾನುಭೂತಿಯಿಂದ ನೋಡಲು ಸಾಧ್ಯವಾಗಿರುವುದನ್ನು ಹಾಗೂ ಬದುಕಿನ ಪರಿಪ್ರೇಕ್ಷ್ಯದಲ್ಲಿ ಎಲ್ಲರೂ ಸಮಾನರು ಎನ್ನುವ ಮನೋಧರ್ಮವನ್ನು ಸತ್ಯವತಿ ಅವರ ಕಥೆಗಳಲ್ಲಿ ಕಾಣಬಹುದು. ಅಂತಃಕರಣದ ಈ ಕಥೆಗಳು, 'ಮಾನವೀಯ ಕಥನ'ಗಳ ರೂಪದಲ್ಲಿ ಆಪ್ತವೆನ್ನಿಸುತ್ತವೆ. ಅಜಯ್ ವರ್ಮಾ ಅವರ ಅನುವಾದ ಸರಳವಾಗಿದೆ, ಸಹಜವಾಗಿದೆ.

**ತೆಲುಗು ಮೂಲ: ಪಿ. ಸತ್ಯವತಿ; ಕನ್ನಡಕ್ಕೆ: ಅಜಯ್ ವರ್ಮಾ ಅಲ್ಲೂರಿ; ಪು: 84; ಬೆ: ₹ 100, ಪ್ರ: ಅಹರ್ನಿಶಿ. ಫೋನ್: 9449174662.**

---

## ನೀರ ಮೇಲಿನ ಮುಳ್ಳು




'ಈ ಸಂಜೆಯನ್ನು ಇಂಚಿಂಚು ಮಧುಭರಿತವಾಗಿಸಬೇಕು / ಕಟ್ಟ ಕಡೆಯ ರಾತ್ರಿಯನ್ನೂ ಮಧುಚಂದ್ರವಾಗಿಸಬೇಕು' ಎಂದು ಮಮತಾ ಅರಸೀಕೆರೆ ಉತ್ಕಟತೆಯಲ್ಲಿ ಬರೆಯಬಲ್ಲರು. ಅವರ ಕವಿತೆಗಳು ಅಪಾರ ಜೀವನಪ್ರೀತಿಯ ಬಿಂಬಗಳಂತಿವೆ. 'ಹುಡುಕಾಟ ಜಾರಿಯಲ್ಲಿದೆ' ಎಂದು ಬರೆಯುವ ಅವರು, ಜೀವನಪ್ರೀತಿಯನ್ನಷ್ಟೇ ಹುಡುಕುತ್ತಿಲ್ಲ; ಬದುಕಿನ ಆರ್ದ್ರತೆ ಸೋರಿಹೋಗುತ್ತಿರುವುದಕ್ಕೆ ಕಾರಣಗಳನ್ನೂ, ಉತ್ತರಗಳನ್ನೂ ಹುಡುಕುತ್ತಿದ್ದಾರೆ. 'ಸದ್ದುಗಳು' ಎನ್ನುವ ಕವಿತೆ ನೋಡಿ. ಕುಕ್ಕರಿನ ಸೀಟಿಯಿಂದ ತುಪಾಕಿಯ ಗುಂಡಿನ ಪೌರುಷದವರೆಗೆ ಲೌಕಿಕದ ಅನೇಕ ಸದ್ದುಗಳ ಚಿತ್ರಣ ಇಲ್ಲಿದೆ. ಕವಿತೆ ಕೊನೆಗೊಳ್ಳುವುದು: 'ಮುರಿದ ಮನಸ್ಸು / ಎದೆಯ ಬಿಕ್ಕು / ಪ್ರಜ್ಞೆಯ ಕುಸಿತ / ದನಿಯೇ ಕೇಳದ ಸದ್ದುಗಳು' ಎನ್ನುವುದರೊಂದಿಗೆ. ಪ್ರಜ್ಞೆಯ ಕುಸಿತ ಹಾಗೂ ದನಿಯಾಗದ ಸದ್ದುಗಳ ಕುರಿತ ಆಸಕ್ತಿ ಸಂಕಲನದುದ್ದಕ್ಕೂ ಬೇರೆ ಬೇರೆ ರೂಪಗಳಲ್ಲಿ ಮರುಕಳಿಸುತ್ತದೆ. ಜೀವನಪ್ರೀತಿಯ ಹುಡುಕಾಟದಲ್ಲಿ, 'ನಮ್ಮ ಹಟ್ಟಿಗಳು ಹಳ್ಳಿಗಳ ಆತ್ಮದಲ್ಲೇ ಇರಲಿ / ನಿರ್ಲಿಪ್ತ ಶಹರಗಳಾಗುವುದು ಬೇಡ' ಎನ್ನುವಂಥ ಅವಸರದ ನಿಲುವನ್ನೂ ಕವಯಿತ್ರಿ ತಳೆದಿರುವುದಿದೆ. ಶಹರಗಳಲ್ಲಿ ದನಿ ಕಳೆದುಕೊಂಡಂತೆ ಇರುವ ಹಟ್ಟಿ ಹಾಗೂ ಹಳ್ಳಿಗಳು ಅವರ ಗಮನಸೆಳೆದಂತಿಲ್ಲ.

**ಲೇ: ಮಮತಾ ಅರಸೀಕೆರೆ; ಪು: 117; ಬೆ: ₹ 150. ಪ್ರ: ಸಪ್ನಾ. ಸಂಪರ್ಕ: info@sapnaink.com**